ದಿನಾಂಕಃ 10-03-2022 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಡಿಡಬ್ಲೂ-1 ರವರ ಪಾಟೀ ಸವಾಲು ವಾದಿ ಪರ ಶ್ರೀ ಕೆ.ಎಂ.ಪಿ. ವಕೀಲರಿಂದಃ**

ವಾದಿ ಸ.ನಂ.129 ಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಮಾಡಿರುತ್ತಾರೆ. ಸ.ನಂ.129 ರ ಹೊಸ ಸ.ನಂ.214 ಎಂದರೆ ನನಗೆ ಮಾಹಿತಿ ಇಲ್ಲ. ಹೊಸ ಸ.ನಂ.214 ಕೃಷಿ ಜಮೀನು ಎಂದರೆ ಸರಿಯಲ್ಲ. ಕಣ ಮನೆ ಅಂದರೆ ದಾವಾ ಶೆಡ್ಯೂಲ್ ಸ್ವತ್ತು ಕೃಷಿ ಜಮೀನಿಗೆ ಲಗತ್ತಾಗಿರುವ ಸ್ವತ್ತು ಎಂದರೆ ಸರಿ. ನಿಡಿ-1 ರಲ್ಲಿ ಸ.ನಂ.129 ಅಥವಾ ಸ.ನಂ.214 ರ ಉಲ್ಲೇಖ ಇರುವುದಿಲ್ಲವೆಂದರೆ ಸರಿ. ನಿಡಿ-2 ರಲ್ಲೂ ಸಹ ಸ.ನಂ.129 ಹಾಗೂ 214 ರ ಉಲ್ಲೇಖ ಇರುವುದಿಲ್ಲವೆಂದರೆ ನನಗೆ ಮಾಹಿತಿ ಇಲ್ಲ. ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಭೂಮಿಯ ಮೇಲ್ಭಾಗದಲ್ಲಿರುವ ಕಟ್ಟಡಗಳಿಗೆ ಮಾತ್ರ ತೆರಿಗೆ ನಿರ್ಧರಣೆ ಮಾಡುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನಿಡಿ-3 ರಲ್ಲಿ ಯಾವುದೇ ಸರ್ವೇ ನಂಬರುಗಳ ಉಲ್ಲೇಖವಿರುವುದಿಲ್ಲ. ದಾವಾ ಸ್ವತ್ತು 10 ಲಕ್ಷಕ್ಕಿಂತ ಹೆಚ್ಚು ಬೆಲೆಬಾಳುತ್ತದೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ನಲವತ್ತು ಸಾವಿರಕ್ಕಿಂತ ಹೆಚ್ಚು ಇರುವುದಿಲ್ಲವೆಂದರೆ ಸರಿಯಲ್ಲ. ವಾದಿಗಳಿಗೆ ತೊಂದರೆ ಮಾಡುವ ಉದ್ದೇಶದಿಂದ ದಾವಾ ಆಸ್ತಿ 10 ಲಕ್ಷಕ್ಕಿಂತ ಹೆಚ್ಚು ಬೆಲೆಬಾಳುತ್ತದೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಡದ ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿನಾಂಕಃ 25-02-2022 ರಂದು  ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಡಿಡಬ್ಲೂ-1 ರವರ ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಕೆ.ಎಸ್.ಎ. ವಕೀಲರಿಂದಃ**

ನಾನು ದಾಖಲೆಗಳನ್ನು ಹಾಜರು ಮಾಡಿದ್ದು ಅದನ್ನು ಈ ಕೆಳಗಿನಂತೆ ಗುರ್ತಿಸಲಾಯಿತು. ನಿಡಿ-3 ತರುವೆ ಗ್ರಾಮ ಪಂಚಾಯಿತಿಯವರು ನೀಡಿದ ದಾವಾ ಸ್ವತ್ತಿನ ಅಸೆಸ್ ಮೆಂಟ್ ಪ್ರತಿ, ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಸಮಯವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್  ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿನಾಂಕ: 26-08-2021 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪ್ರತಿವಾದಿಯ ಮುಖ್ಯ ವಿಚಾರಣೆ ಪ್ರಾಥಮಿಕ ಮುದ್ದೆ ಮೇಲೆ ಶ್ರೀ ಕೆ.ಎಸ್.ಎ. ವಕೀಲರಿಂದ:</u>**

ನನ್ನ ಮುಖ್ಯ ವಿಚಾರಣೆಯನ್ನು ಲಿಖಿತವಾಗಿ ಪ್ರಮಾಣ ಪತ್ರದಲ್ಲಿ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿರುತ್ತದೆ. ಅದರ ಪ್ರತೀ ಪುಟಕ್ಕೂ ನಾನೇ ರುಜು ಮಾಡಿರುತ್ತೇನೆ.

ನಾನು ದಾಖಲೆಗಳನ್ನು ಹಾಜರು ಮಾಡಿದ್ದು ಅದನ್ನು ಈ ಕೆಳಗಿನಂತೆ ಗುರ್ತಿಸಲಾಯಿತು.

ನಿಡಿ-1 ದಿ:10-08-2021 ರಂದು 1 ನೇ ಪ್ರತಿವಾದಿ ಉಪನೊಂದಾಣಾಧಿಕಾರಿಗಳಿಗೆ ಸಲ್ಲಿಸಿದ ಅರ್ಜಿ

ನಿಡಿ-2 ಉಪನೊಂದಾಣಾಧಿಕಾರಿಗಳು ಮೂಡಿಗೆರೆ ಉಪನೊಂದಾಣಿ ಕಛೇರಿ ವ್ಯಾಪ್ತಿಯ ಕೃಷಿ ಜಮೀನುಗಳ ಮತ್ತು ನಿವೇಶನದ ಸ್ಥಿರಾಸ್ಥಿಗಳ ಮಾರ್ಗಸೂಚಿ ಮೌಲ್ಯದ ದರ ಪಟ್ಟಿ ದಿ:01-01-2019 ರಂದು ನೀಡಿದ ದಾಖಲೆ, ಎಂದು ಗುರುತಿಸಲಾಯಿತು.

**<u>ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿ:

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.